ಚಾಮರಾಜನಗರ ಕ್ಷೇತ್ರಕ್ಕೆ ಕುಡಿಯುವ ನೀರಿನ ವ್ಯವಸ್ಥೆ

1468 (2067)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಕ್ಷೇತ್ರದಲ್ಲೇ ಸುಮಾರು 300ಕ್ಕೂ ಹೆಚ್ಚು ಕೊಳವೆಬಾವಿಗಳು ಕೆಟ್ಟು ದುರಸ್ತಿಯಾಗದೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು?

ಆ) ನೀರಿನ ಹಾಹಾಕಾರ ಇರುವ ಅನೇಕ ಹಳ್ಳಿಗಳಿಗೆ ಕನಿಷ್ಟ 250 ಕೊಳವೆಬಾವಿಗಳು ಬೇಡಿಕೆ ಇರುವುದು ನಿಜವೇ?

ಇ) ಹಾಗಿದ್ದಲ್ಲಿ ಈ ಬೇಡಿಕೆಯನ್ನು ಈಡೇರಿಸಲು ತಕ್ಷಣ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಕೈಪಂಪು ಕೊಳವೆಬಾವಿಗಳು ಕೆಟ್ಟಾಗ ಸಣ್ಣಪ್ರಮಾಣದ ದುರಸ್ತಿ ಕೆಲಸಗಳನ್ನು ಆಯಾ ಗ್ರಾಮಪಂಚಾಯತಿಗಳೇ ನಿರ್ವಹಿಸುತ್ತಿವೆ. ದೊಡ್ಡಪ್ರಮಾಣದ ದುರಸ್ತಿ ಕೆಲಸಗಳನ್ನು ಸಂಚಾರಿ ದುರಸ್ತಿ ಘಟಕದ ಮೂಲಕ ನಿರ್ವಹಿಸಲಾಗುತ್ತಿದೆ. ಚಾಮರಾಜನಗರ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಕೈಪಂಪುಗಳ ನಿರ್ವಹಣೆ ಮತ್ತು ದುರಸ್ತಿ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದ್ದು, ಮೇ-99ರ ಅಂತ್ಯಕ್ಕೆ ದುರಸ್ತಿಯಾಗಬೇಕಾಗಿರುವ ಕೈಪಂಪುಗಳ ಸಂಖ್ಯೆ 41 ಇರುತ್ತವೆ, ಇವುಗಳನ್ನು ಪ್ರಸಕ್ತ ತಿಂಗಳಿನಲ್ಲಿ ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಆ) ಕೆಲವು ಕೊಳವೆಬಾವಿಗಳಲ್ಲಿ ಇಳುವರಿ ಕಡಿಮೆಯಾಗುವುದರಿಂದಾಗಿ: ಅವುಗಳು ಬತ್ತುವುದರಿಂದಾಗಿ ಕೆಲವು ಜನವಸತಿಗಳಲ್ಲಿ ಸ್ವಲ್ಪಮಟ್ಟಿಗೆ ಕುಡಿಯುವ ನೀರಿನ ಸಮಸ್ಯೆಯಿರುತ್ತದೆ. ಈ ಸಮಸ್ಯೆಯನ್ನು ಹಾಲಿ ಕೊಳವೆಬಾವಿಗಳನ್ನು ಸ್ವಚ್ಛಗೊಳಿಸುವ: ಹೈಡ್ರೋ-ಫ್ರಾಕ್ಚರ್‌ಗೊಳಿಸುವ: ಆಳ ಹೆಚ್ಚಿಸುವ ಮೂಲಕ ಪುನಶ್ಚೇತನಗೊಳಿಸಿ, ಮತ್ತು ಪರ್ಯಾಯ ಜಲಮೂಲ ಸ್ಥಾಪಿಸುವುದು ಅನಿವಾರ್ಯವಿದ್ದಲ್ಲಿ 'ಹೊಸ ಕೊಳವೆ ಬಾವಿಯನ್ನು ಒದಗಿಸುವ ಮೂಲಕ ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಮೇಲ್ಕಂಡ ಕಾಮಗಾರಿಗಳ ಅನುಷ್ಠಾನಕ್ಕಾಗಿ 1999-2000 ಸಾಲಿನ ಆಯವ್ಯಯದಲ್ಲಿ ಚಾಮರಾಜನಗರ ಜಿಲ್ಲಾಪಂಚಾಯತ್‌ಗೆ ರೂ.59.48 ಲಕ್ಷಗಳನ್ನು ಒದಗಿಸಲಾಗಿದ್ದು, ಸದರಿ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ

ಸಮಸ್ಯೆ ಪರಿಹಾರಕ್ಕಾಗಿ ಆದ್ಯತೆ ಮೇಲೆ ಕ್ರಮ ಕೈಗೊಳ್ಳಲು ಜಿಲ್ಲಾ ಪಂಚಾಯತ್‌ಗೆ ಸೂಚಿಸಲಾಗಿದೆ.

ರಾಜ್ಯದಲ್ಲಿ ವೃತ್ತಿಪರ ಶಿಕ್ಷಣ

1470 (2046)

ಶ್ರೀ ಎಸ್.ಯೋಗೀಶ್‌ಭಟ್ (ಮಂಗಳೂರು): ಮಾನ್ಯ ವಯಸ್ಕರ ಶಿಕ್ಷಣ, ವೃತ್ತಿ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ ಹಾಗೂ ಮುದ್ರಣ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ವೃತ್ತಿಪರ ಶಿಕ್ಷಣದಲ್ಲಿ ವಿದ್ಯಾರ್ಜನೆ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಇವುಗಳಲ್ಲಿ ಎಷ್ಟು ಕೋರ್ಸ್‌ಗಳಲ್ಲಿ ಕಲಿಸಲಾಗುತ್ತಿದೆ;

2) ಶಿಕ್ಷಣ ನೀಡುತ್ತಿರುವ ಅಧ್ಯಾಪಕರುಗಳ ಒಟ್ಟು ಸಂಖ್ಯೆ ಎಷ್ಟು;

3) ಇದಕ್ಕಾಗಿ ಸರ್ಕಾರಕ್ಕೆ ತಗಲುವ ವೆಚ್ಚ ಎಷ್ಟು;

4) ಈ ಕೋರ್ಸ್‌ಗಳನ್ನು ನಿಲ್ಲಿಸಲಾಗಿದೆಯೇ ಹಾಗಿದ್ದಲ್ಲಿ, ಸರ್ಕಾರ ವೃತ್ತಿಪರ ಶಿಕ್ಷಣ ಮುಂದುವರೆಸಲು ಕ್ರಮ ಕೈಗೊಳ್ಳುವುದೇ;

ಶ್ರೀ ಆರ್.ಕೃಷ್ಣಪ್ಪ (ವಯಸ್ಕರ ಶಿಕ್ಷಣ ಸಚಿವರು):

1) 51, 057 ವಿದ್ಯಾರ್ಥಿಗಳು (ಪ್ರಥಮ ವರ್ಷದಲ್ಲಿ 25,945 ದ್ವಿತೀಯ ವರ್ಷದಲ್ಲಿ 25,112) 47 ವಿಷಯಗಳಲ್ಲಿ (ಟ್ರೇಡುಗಳಲ್ಲಿ) ಒಟ್ಟು 1, 051 ಕೋರ್ಸ್‌ಗಳಿವೆ.

2) 5.674 (ಇವರುಗಳಲ್ಲಿ 143 ಶಿಕ್ಷಕರ ಸೇವೆಯನ್ನು ಸರ್ವೋಚ್ಚ ನ್ಯಾಯಾಲಯದ ಆಜ್ಞೆ ಮೇರೆಗೆ ಸಕ್ರಮಗೊಳಿಸಲಾಗಿದೆ)

3) 1999-2000ನೇ ಸಾಲಿನಲ್ಲಿ ಅಂದಾಜು ವೆಚ್ಚ ರೂ. 1068.61 ಲಕ್ಷಗಳು

4) ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ವೃತ್ತಿ ಶಿಕ್ಷಣ ಕೋರ್ಸ್‌ಗಳನ್ನು ನಡೆಸುತ್ತಿದ್ದು, 8ನೇ ಯೋಜನೆಯ ನಂತರ ಕೇಂದ್ರ ಸರ್ಕಾರವು ಎಲ್ಲಾ ಅನುದಾನವನ್ನು ನಿಲ್ಲಿಸಿದರೂ ಕೂಡ ಸಧ್ಯಕ್ಕೆ ಕೋರ್ಸ್‌ಗಳನ್ನು ರಾಜ್ಯ ಸರ್ಕಾರವು ನಡೆಸುತ್ತಿದೆ. ಮುಂದೆ ವೃತ್ತಿ ಶಿಕ್ಷಣವನ್ನು ಮುಂದುವರೆಸುವ ಬಗ್ಗೆ ಸರ್ಕಾರವು ತೀರ್ಮಾನ ಕೈಗೊಳ್ಳಬೇಕಾಗಿದೆ.